ಓ.ಎಸ್.183/2021 ಡಿ.ಡಬ್ಲು-1
*ಶಂಕ್ರಪ್ಪ ತಂದೆ ನಾಗಪ್ಪ*

ದಿ.19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ:-**

ಶಿವಶಂಕ್ರಪ್ಪ ನಮ್ಮ ತಾಯಿಯ ತಂದೆ. ಶಿವಶಂಕ್ರಪ್ಪರವರ ಹೆಂಡತಿಯ ಹೆಸರು ಭೀಮವ್ವ. ಶಿವಶಂಕ್ರಪ್ಪ ಮತ್ತು ಭೀಮವ್ವರಿಗೆ ಹನುಮಂತ ಮತ್ತು ಸಿದ್ದಮ್ಮ ಮಕ್ಕಳು. ಹನುಮಂತನಿಗೆ 4 ಜನ ಮಕ್ಕಳು ಅವರೆಂದರೆ ಗಂಗಪ್ಪ, ಶಿವಶಂಕರ, ಹನುಮಂತಿ ಮತ್ತು ಗದ್ದೆಮ್ಮ. ಸದರಿಯವರು ಮಸ್ಕಿಯಲ್ಲಿರುತ್ತಾರೆ. ಭೀಮವ್ವ ಕರಡಕಲ್ಲಿನಲ್ಲಿ ಇರುತ್ತಾಳೆ. ನಮ್ಮ ತಾಯಿಯನ್ನು ಕರಡಕಲ್ಲಿನಲ್ಲಿ ಮದುವೆ ಮಾಡಿ ಕೊಟ್ಟಿರುತ್ತಾರೆ. ನಮ್ಮ ತಂದೆ ಹೆಸರು ನಾಗಪ್ಪ. ಸಿದ್ದಮ್ಮಳಿಗೆ ನಾನು ಒಬ್ಬನೆ ಮಗ. ನಾನು ಕರಡಕಲ್ಲಿನಲ್ಲಿ ವಾಸವಾಗಿರುತ್ತೇನೆ. ನಾನು 10 ನೇ ತರಗತಿ ಓದಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವದಿಲ್ಲ. ಈ ಕೇಸನ್ನು ಮದನ್ ರವರ ಭೀಮವ್ವರ ವಿರುದ್ದ ಹಾಕಿರುತ್ತಾರೆ. ಅವರು ಭೀಮವ್ವ ಮತ್ತು ನಮ್ಮ ತಾಯಿ ಸಿದ್ದಮ್ಮಳ ಮೇಲೆ ಕೇಸು ಹಾಕಿರುತ್ತಾರೆ. ವಾದಿ ಹೊಲ ನಮ್ಮದು ಎಂದು ಹಾಕಿರುತ್ತಾರೆ. ನಾನು 1981 ರಲ್ಲಿ ಜನಿಸಿರುತ್ತೇನೆ. 1995 ರಲ್ಲಿ ನನ್ನ ವಯಸ್ಸು 15 ವರ್ಷ ಇತ್ತು. ಆಗ ಮದನ್ ಮತ್ತು ನಮ್ಮ ಮಾವ ಹನುಮಪ್ಪನ ನಡುವೆ ಏನು ವ್ಯವಹಾರ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಚಿಕ್ಕವನಿರುವದರಿಂದ ವಾದಿ ಹೊಲವನ್ನು ಖರೀದಿ ಮಾಡಿದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ರೀತಿ ಸಾಗುವಳಿ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ನಮ್ಮ ಮಾವ ಹನುಮಪ್ಪ ತೀರಿಕೊಂಡು 6 ವರ್ಷಗಳಾಗಿರುತ್ತವೆ.

2. ಸಾಕ್ಷಿ ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಓ.ಎಸ್.ನಂ.40/1998 ದಾವೆಯನ್ನು ಮದನ್ ಭೀಮವ್ವರ ಮೇಲೆ ಹಾಕಿರುತ್ತಾನೆ. ಹೊಲ ನಮ್ಮದು ಎಂದು ಕೇಸು ಹಾಕಿರುತ್ತಾನೆ. ಓ.ಎಸ್.ನಂ.40/1998 ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ದಸ್ತಾವೇಜು ನಂ.351/1999-2000 ದಾಖಲೆ ಏನು ಎಂದು ನನಗೆ ಗೊತ್ತಿಲ್ಲ. ಎಫ್.ಡಿ.ಪಿ.ನಂ.13/2015 ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ಓ.ಎಸ್.ನಂ.40/1998 ಮತ್ತು ಎಫ್.ಡಿ.ಪಿ.ನಂ.13/2015 ಗಳನ್ನು ಸಿದ್ದಮ್ಮ ಮತ್ತು ಬೀಮಮ್ಮ ಜಮೀನು ಮಾರಾಟ ಮಾಡಿದ ಬಗ್ಗೆ ಗೊತ್ತಿಲ್ಲ ಎಂದು ಹೇಳಿ ಬರೆಸಿರುತ್ತೇನೆ. ಅದನ್ನು ಹೊರತು ಪಡಿಸಿ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ಭೀಮಮ್ಮ ಈ

ರೀತಿ ಸಾಕ್ಷಿ ಹೇಳು ಎಂದು ಹೇಳಿದ್ದಕ್ಕೆ ಸಹಾಯ ಮಾಡಲು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ. ಹನುಮಂತ ಜೀವಂತ ಇದ್ದಾಗ ಏನೇನು ವ್ಯವಹಾರ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಜಮೀನು ಮಾರಾಟ ಮಾಡುವಾಗ ನನಗೆ 15 ವರ್ಷ ವಯಸ್ಸು ಇದ್ದುದರಿಂದ ಹನುಮಂತ ಏನು ವ್ಯವಹಾರ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.